# ವಿಮಾನ ಅಪಹರಣ ನಿರೋಧ ಅಧಿನಿಯಮ, 1982

**(1982ರ ಅಧಿನಿಯಮ ಸಂಖ್ಯೆ 65)**

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 5 ರಿಂದ 8 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I

**ಪ್ರಾರಂಭಿಕ**

1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II

**ವಿಮಾನ ಅಪಹರಣ ಮತ್ತು ಸಂಬಂಧಪಟ್ಟ ಅಪರಾಧಗಳು**

3. ವಿಮಾನ ಅಪಹರಣ
4. ವಿಮಾನ ಅಪಹರಣಕ್ಕಾಗಿ ದಂಡನೆ
5. ವಿಮಾನ ಅಪಹರಣಕ್ಕೆ ಸಂಬಂಧಿಸಿದ ಹಿಂಸಾಕೃತ್ಯಗಳಿಗಾಗಿ ದಂಡನೆ
5ಎ. ತನಿಖೆ ಇತ್ಯಾದಿಗಳನ್ನು ನಡೆಸುವ ಅಧಿಕಾರಗಳನ್ನು ಪ್ರದಾನ ಮಾಡುವುದು
6. ಅಧಿಕಾರ ವ್ಯಾಪ್ತಿ
6ಎ. ನಿಯೋಜಿತ ನ್ಯಾಯಾಲಯಗಳು
6ಬಿ. ನಿಯೋಜಿತ ನ್ಯಾಯಾಲಯವು ಅಧಿವಿಚಾರಣೆ ನಡೆಸಬಹುದಾದ ಅಪರಾಧಗಳು
6ಸಿ. ನಿಯೋಜಿತ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಸಂಹಿತೆಯ ಅನ್ವಯ

### ಅಧ್ಯಾಯ – III

**ಸಂಕೀರ್ಣ**

7. ಪ್ರತ್ಯರ್ಪಣಕ್ಕೆ ಸಂಬಂಧಿಸಿದ ಉಪಬಂಧಗಳು
7ಎ. ಜಾಮೀನಿಗೆ ಸಂಬಂಧಿಸಿದ ಉಪಬಂಧ
8. ಒಡಂಬಡಿಕೆಗೆ ಕರಾರು ಮಾಡಿಕೊಳ್ಳುವ ಪಕ್ಷಕಾರರು
9. ಕೆಲವೊಂದು ವಿಮಾನವು ಒಡಂಬಡಿಕೆ ದೇಶಗಳಲ್ಲಿ ನೋಂದಣಿಯಾಗಿರುವುದಾಗಿ ಪರಿಗಣಿಸುವ ಅಧಿಕಾರ

10. ಪ್ರಾಸಿಕ್ಯೂಷನ್ ನಡೆಸಲು ಪೂರ್ವ ಮಂಜೂರಾತಿ ಅವಶ್ಯ

10ಎ. 4ನೇ ಮತ್ತು 5ನೇ ಪ್ರಕರಣಗಳ ಮೇರೆಗಿನ ಅಪರಾಧಗಳ ಬಗ್ಗೆ ಪೂರ್ವ ಭಾವನೆ

11. ಸದ್ಭಾವನೆಯಿಂದ ಕೈಗೊಂಡ ಕಾರ್ಯಕ್ಕೆ ರಕ್ಷಣೆ

# ವಿಮಾನ ಅಪಹರಣ ನಿರೋಧ ಅಧಿನಿಯಮ, 1982

(1982ರ ಅಧಿನಿಯಮ ಸಂಖ್ಯೆ 65)

[6ನೇ ನವೆಂಬರ್, 1982]

ವಿಮಾನವನ್ನು ಕಾನೂನುಬಾಹಿರವಾಗಿ ವಶಪಡಿಸಿಕೊಳ್ಳುವುದನ್ನು ಹತ್ತಿಕ್ಕಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಮಾಡಿಕೊಂಡ ಒಡಂಬಡಿಕೆಯನ್ನು ಜಾರಿಗೆ ತರುವ ಅಧಿನಿಯಮ.

ವಿಮಾನವನ್ನು ಕಾನೂನುಬಾಹಿರವಾಗಿ ವಶಪಡಿಸಿಕೊಳ್ಳುವುದನ್ನು ಹತ್ತಿಕ್ಕುವ ಸಲುವಾಗಿನ ಒಡಂಬಡಿಕೆಗೆ 1970ರ ಡಿಸೆಂಬರ್ 16 ರಂದು ಹೇಗ್‌ನಲ್ಲಿ ಸಹಿ ಹಾಕಿರುವುದರಿಂದ;

ಭಾರತವು, ಸದರಿ ಒಡಂಬಡಿಕೆಗೆ ಸಮ್ಮತಿಸಬೇಕಾದದ್ದು ಮತ್ತು ಅದನ್ನು ಜಾರಿಗೆ ತರಲು ಹಾಗೂ ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಗಳನ್ನು ಕಲ್ಪಿಸಬೇಕಾದದ್ದೂ ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ಮೂರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ವಿಮಾನ ಅಪಹರಣ ನಿರೋಧ ಅಧಿನಿಯಮ, 1982 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಇದು ಯಾರೇ ವ್ಯಕ್ತಿಯು ಅದರ ಮೇರೆಗೆ ಭಾರತದ ಹೊರಗೆ ಮಾಡಿದ ಯಾವುದೇ ಅಪರಾಧಕ್ಕೂ ಸಹ ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಿಂದ ಜಾರಿಗೆ ಬರತಕ್ಕದ್ದು.

* ದಿನಾಂಕ 15.11.1982 ರಿಂದ ಜಾರಿಗೆ ಬಂದಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ವಿಮಾನ" ಎಂದರೆ ಭಾರತದಲ್ಲಿ ನೋಂದಣಿಯಾಗಿರಲಿ ಅಥವಾ ಆಗಿಲ್ಲದಿರಲಿ, ಮಿಲಿಟರಿ ವಿಮಾನವನ್ನು ಅಥವಾ ಸೀಮಾಸುಂಕ ಸೇವೆಗೆ ಅಥವಾ ಪೊಲೀಸ್ ಸೇವೆಗೆ ಬಳಸಿದ ವಿಮಾನವನ್ನು ಹೊರತುಪಡಿಸಿ ಯಾವುದೇ ವಿಮಾನ;

(ಬಿ) "ಭಾರತದಲ್ಲಿ ನೋಂದಣಿಯಾದ ವಿಮಾನ" ಎಂದರೆ ಭಾರತದಲ್ಲಿ ತತ್ಕಾಲದಲ್ಲಿ ನೋಂದಣಿಯಾಗಿರುವ ಒಂದು ವಿಮಾನ;

(ಸಿ) "ಒಡಂಬಡಿಕೆ ದೇಶ" ಎಂದರೆ ಹೇಗ್ ಒಡಂಬಡಿಕೆಯು ತತ್ಕಾಲದಲ್ಲಿ ಜಾರಿಯಲ್ಲಿರುವ ರಾಷ್ಟ್ರ;

(ಡಿ) "ಹೇಗ್ ಒಡಂಬಡಿಕೆ" ಎಂದರೆ ವಿಮಾನವನ್ನು ಕಾನೂನುಬಾಹಿರವಾಗಿ ವಶಪಡಿಸಿಕೊಳ್ಳುವುದನ್ನು ಹತ್ತಿಕ್ಕುವುದಕ್ಕಾಗಿ ಹೇಗ್‌ನಲ್ಲಿ 1970ರ ಡಿಸೆಂಬರ್ 16 ರಂದು ಸಹಿ ಹಾಕಿದ ಒಂದು ಒಡಂಬಡಿಕೆ;

(ಇ) "ಮಿಲಿಟರಿ ವಿಮಾನ" ಎಂದರೆ ಯಾವುದೇ ದೇಶದ ನೌಕಾ, ಸೇನಾ, ವಾಯು ಬಲದ ಅಥವಾ ಯಾವುದೇ ಇತರ ಸಶಸ್ತ್ರ ಬಲಗಳ ವಿಮಾನ ಮತ್ತು ಇದರಲ್ಲಿ ಆ ಉದ್ದೇಶಕ್ಕಾಗಿ ನಿಯೋಜಿತವಾಗಿರುವಂಥ ಯಾವುದೇ ಬಲದಲ್ಲಿನ ವ್ಯಕ್ತಿಯ ಆಜ್ಞಾಪನೆಗೆ ತತ್ಕಾಲದಲ್ಲಿ ಒಳಪಟ್ಟಿರುವ ಪ್ರತಿಯೊಂದು ವಿಮಾನವು ಒಳಗೊಳ್ಳುತ್ತದೆ.

## ಅಧ್ಯಾಯ - II

## ವಿಮಾನ ಅಪಹರಣ ಮತ್ತು ಸಂಬಂಧಪಟ್ಟ ಅಪರಾಧಗಳು

**3. ವಿಮಾನ ಅಪಹರಣ.-** (1) ಹಾರಾಟದಲ್ಲಿರುವ ಒಂದು ವಿಮಾನದಲ್ಲಿ ಪ್ರಯಾಣ ಮಾಡುತ್ತಿರುವ ಯಾರೇ ಆಗಲಿ ಕಾನೂನುಬಾಹಿರವಾಗಿ, ಬಲ ಪ್ರಯೋಗದಿಂದ ಅಥವಾ ಬಲ ಪ್ರಯೋಗದ ಅಥವಾ ಇನ್ನಾವುದೇ ರೀತಿಯ ಭಯೋತ್ಪಾದನೆಯ ಬೆದರಿಕೆಯಿಂದ ಆ ವಿಮಾನವನ್ನು ವಶಪಡಿಸಿಕೊಂಡರೆ ಅಥವಾ ಅದರ ಮೇಲೆ ನಿಯಂತ್ರಣ ಚಲಾಯಿಸಿದರೆ, ಅವನು ಅಂಥ ವಿಮಾನ ಅಪಹರಣದ ಅಪರಾಧ ಮಾಡಿದಂತಾಗುತ್ತದೆ.

(2) ಯಾವುದೇ ವಿಮಾನಕ್ಕೆ ಸಂಬಂಧಪಟ್ಟಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಕೃತ್ಯವನ್ನು ಅಥವಾ ಅಂಥ ಯಾವುದೇ ಕೃತ್ಯ ಮಾಡಲು ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು ಅಂಥ ವಿಮಾನ ಅಪಹರಣದ ಅಪರಾಧ ಮಾಡಿರುವನೆಂದು ಭಾವಿಸತಕ್ಕದ್ದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ, ಒಂದು ವಿಮಾನವನ್ನು ಹತ್ತಿದ ತರುವಾಯ ಅದರ ಎಲ್ಲಾ ಹೊರ ಬಾಗಿಲುಗಳನ್ನು ಮುಚ್ಚಿದ ಕ್ಷಣದಿಂದ ಇಳಿಯುವುದಕ್ಕಾಗಿನ ಅಂಥ ಯಾವುದೇ ಬಾಗಿಲನ್ನು ತೆಗೆಯುವ ಕ್ಷಣದವರೆಗಿನ ಯಾವುದೇ ಸಮಯದಲ್ಲಿ ಆ ವಿಮಾನವು ಹಾರಾಟದಲ್ಲಿರುವುದಾಗಿ ಭಾವಿಸತಕ್ಕದ್ದು ಮತ್ತು ಅದನ್ನು ಬಲವಂತದಿಂದ ನೆಲಕ್ಕಿಳಿಸಿದ ಸಂದರ್ಭದಲ್ಲಿ, ಯಾವ ದೇಶದಲ್ಲಿ ಹಾಗೆ ಬಲವಂತದಿಂದ ನೆಲಕ್ಕಿಳಿಸಲಾಯಿತೋ ಆ ದೇಶದ ಸಕ್ಷಮ ಪ್ರಾಧಿಕಾರಿಗಳು ಆ ವಿಮಾನದ ಮತ್ತು ಅದರಲ್ಲಿರುವ ವ್ಯಕ್ತಿಗಳ ಮತ್ತು ಸ್ವತ್ತಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವವರೆಗೆ ವಿಮಾನವು ಹಾರಾಟದಲ್ಲಿರುವುದಾಗಿ ಭಾವಿಸತಕ್ಕದ್ದು.

**4. ವಿಮಾನ ಅಪಹರಣಕ್ಕಾಗಿ ದಂಡನೆ.-** ವಿಮಾನ ಅಪಹರಣದ ಅಪರಾಧವನ್ನು ಮಾಡುವ ಯಾರೇ ಆಗಲಿ, ಆಜೀವ ಕಾರಾವಾಸದಿಂದ ದಂಡಿತನಾಗತಕ್ಕದ್ದು ಹಾಗೂ ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

**5. ವಿಮಾನ ಅಪಹರಣಕ್ಕೆ ಸಂಬಂಧಿಸಿದ ಹಿಂಸಾಕೃತ್ಯಗಳಿಗಾಗಿ ದಂಡನೆ.-** ಒಂದು ವಿಮಾನ ಅಪಹರಣದ ಅಪರಾಧವನ್ನು ಮಾಡುವ ಯಾರೇ ವ್ಯಕ್ತಿಯು ಅಂಥ ಅಪರಾಧದ ಸಂಬಂಧದಲ್ಲಿ ಅಂಥ ವಿಮಾನದಲ್ಲಿಯ ಯಾರೇ ಪ್ರಯಾಣಿಕರಿಗೆ ಅಥವಾ ಸಿಬ್ಬಂದಿ ಸದಸ್ಯರಿಗೆ ಹಿಂಸೆ ನೀಡುವ ಯಾವುದೇ ಕೃತ್ಯವನ್ನು ಮಾಡಿದರೆ, ಅವನು ಅಂಥ ಕೃತ್ಯವನ್ನು ಭಾರತದಲ್ಲಿ ಮಾಡಿದ್ದರೆ, ಭಾರತದಲ್ಲಿ

ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಅವನು ದಂಡನೀಯನಾಗಬಹುದಾಗಿದ್ದ ದಂಡನೆಗೆ ಗುರಿಯಾಗತಕ್ಕದ್ದು.

**5ಎ. ತನಿಖೆ ಇತ್ಯಾದಿಗಳನ್ನು ನಡೆಸುವ ಅಧಿಕಾರಗಳನ್ನು ಪ್ರದಾನ ಮಾಡುವುದು.**- (1) ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ದಂಡ ಪ್ರಕ್ರಿಯಾ ಸಂಹಿತೆ, 1973ರ ಮೇರೆಗೆ ಒಬ್ಬ ಪೊಲೀಸ್ ಅಧಿಕಾರಿಯು ಚಲಾಯಿಸಬಹುದಾದ ದಸ್ತಗಿರಿ ಮಾಡುವ, ತನಿಖೆ ನಡೆಸುವ ಮತ್ತು ಪ್ರಾಸಿಕ್ಯೂಷನ್ ಅಧಿಕಾರಗಳನ್ನು ಕೇಂದ್ರ ಸರ್ಕಾರದ ಯಾರೇ ಅಧಿಕಾರಿಗೆ ಪ್ರದಾನ ಮಾಡಬಹುದು.

(2) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಕೇಂದ್ರ ಸರ್ಕಾರದ ಅಧಿಕಾರಿಗೆ ಎಲ್ಲ ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರದ ಎಲ್ಲಾ ಅಧಿಕಾರಿಗಳು ನೆರವು ನೀಡುವಂತೆ ಈ ಮೂಲಕ ಅಗತ್ಯಪಡಿಸಲಾಗಿದೆ ಮತ್ತು ಹಾಗೆ ನೆರವು ನೀಡಲು ಅವರಿಗೆ ಅಧಿಕಾರ ಕೊಡಲಾಗಿದೆ.

**6. ಅಧಿಕಾರ ವ್ಯಾಪ್ತಿ.**- (1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗಿನ ಒಂದು ಅಪರಾಧವನ್ನು ಭಾರತದ ಹೊರಗೆ ಮಾಡಲಾಗಿರುವಲ್ಲಿ, ಅಂಥ ಅಪರಾಧವನ್ನು ಮಾಡುವ ವ್ಯಕ್ತಿಯು ಅಂಥ ಅಪರಾಧವನ್ನು ಅವನು ಕಂಡುಬರಬಹುದಾದ ಭಾರತದ ಒಳಗಿನ ಯಾವುದೇ ಸ್ಥಳದಲ್ಲಿ ಮಾಡಿದ್ದಿದ್ದರೆ ಹೇಗೋ ಹಾಗೆ ಅದಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯೊಂದಿಗೆ ವ್ಯವಹರಿಸಬಹುದು.

(2) 4ನೇ ಪ್ರಕರಣದ ಅಥವಾ 5ನೇ ಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವನ್ನು ಭಾರತದ ಹೊರಗೆ ಮಾಡಲಾಗಿದ್ದರೆ, ಅಂಥ ಅಪರಾಧವನ್ನು,-

(ಎ) ಭಾರತದಲ್ಲಿ ನೋಂದಣಿಯಾದ ವಿಮಾನದಲ್ಲಿ ಮಾಡಲಾಗಿದ್ದ ಹೊರತು;

(ಬಿ) ಭಾರತದಲ್ಲಿ ಪ್ರಧಾನ ವ್ಯವಹಾರ ಸ್ಥಳವನ್ನು ಹೊಂದಿರುವಂಥ ಅಥವಾ ಅಂಥ ವ್ಯವಹಾರ ಸ್ಥಳವನ್ನು ಹೊಂದಿಲ್ಲದಿರುವಲ್ಲಿ, ಖಾಯಂ ನಿವಾಸ ಸ್ಥಳವನ್ನು ಹೊಂದಿರುವಂಥ ಗುತ್ತಿಗೆದಾರನಿಗೆ ಸಿಬ್ಬಂದಿಯಿಲ್ಲದೆ ತತ್ಕಾಲದಲ್ಲಿ ಗುತ್ತಿಗೆ ಕೊಟ್ಟಿರುವ ವಿಮಾನದಲ್ಲಿ ಮಾಡಲಾಗಿದ್ದ ಹೊರತು; ಅಥವಾ

(ಸಿ) ಆಪಾದಿತ ಅಪರಾಧಿಯು ಭಾರತದ ನಾಗರಿಕನಾಗಿದ್ದ ಹೊರತು ಅಥವಾ ಯಾವ ವಿಮಾನಕ್ಕೆ ಸಂಬಂಧಿಸಿ ಅಂಥ ಅಪರಾಧವನ್ನು ಮಾಡಲಾಯಿತೋ ಆ ವಿಮಾನವು ಭಾರತದಲ್ಲಿ ಇಳಿದಾಗ ಅಥವಾ ಭಾರತದಲ್ಲಿ ಕಾಣಿಸಿಕೊಂಡಾಗ ಅವನು ಅದರಲ್ಲಿ ಇದ್ದ ಹೊರತು

- ಯಾವುದೇ ನ್ಯಾಯಾಲಯವು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**6ಎ. ನಿಯೋಜಿತ ನ್ಯಾಯಾಲಯಗಳು.**- (1) ಶೀಘ್ರ ಅಧಿವಿಚಾರಣೆ ನಡೆಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನ ಸಹಮತಿಯನ್ನು ಪಡೆದು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಒಂದು ಸೆಷೆನ್ಸ್ ನ್ಯಾಯಾಲಯವನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದ ಅಥವಾ ಪ್ರದೇಶಗಳ ಸಲುವಾಗಿ ನಿಯೋಜಿತ ನ್ಯಾಯಾಲಯವೆಂದು ನಿರ್ದಿಷ್ಟಪಡಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ, ನಿಯೋಜಿತ ನ್ಯಾಯಾಲಯವು ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ದೈನಂದಿನ ಆಧಾರದ ಮೇಲೆ ಅಧಿವಿಚಾರಣೆಯನ್ನು ನಡೆಸತಕ್ಕದ್ದು.

**6ಬಿ. ನಿಯೋಜಿತ ನ್ಯಾಯಾಲಯವು ಅಧಿವಿಚಾರಣೆ ನಡೆಸಬಹುದಾದ ಅಪರಾಧಗಳು.-** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ,-

(ಎ) ಈ ಅಧಿನಿಯಮದ ಮೇರೆಗಿನ ಎಲ್ಲಾ ಅಪರಾಧಗಳನ್ನು 6ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ನಿಯೋಜಿತ ನ್ಯಾಯಾಲಯವು ಮಾತ್ರವೇ ಅಧಿವಿಚಾರಣೆ ನಡೆಸತಕ್ಕದ್ದು.

(ಬಿ) ಈ ಅಧಿನಿಯಮದ ಮೇರೆಗಿನ ಒಂದು ಅಪರಾಧವನ್ನು ಮಾಡಿರುವನೆಂದು ಆಪಾದಿತನಾದ ಅಥವಾ ಶಂಕಿತನಾದ ವ್ಯಕ್ತಿಯನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 167ನೇ ಪ್ರಕರಣದ (2)ನೇ ಉಪಪ್ರಕರಣದ ಅಥವಾ (2ಎ) ಉಪಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟನ ಬಳಿ ಕಳುಹಿಸಿದಾಗ, ಅಂಥ ಮ್ಯಾಜಿಸ್ಟ್ರೇಟನು ನ್ಯಾಯಿಕ ಮ್ಯಾಜಿಸ್ಟ್ರೇಟನಾಗಿರುವಲ್ಲಿ, ಒಟ್ಟಾರೆ ಹದಿನೈದು ದಿನಗಳಿಗೆ ಮೀರದ ಮತ್ತು ಅಂಥ ಮ್ಯಾಜಿಸ್ಟ್ರೇಟನು ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟನಾಗಿರುವಲ್ಲಿ, ಒಟ್ಟಾರೆ ಏಳು ದಿನಗಳಿಗೆ ಮೀರದ ಅವಧಿಯವರೆಗೆ ಅಂಥ ವ್ಯಕ್ತಿಯನ್ನು ತಾನು ಯುಕ್ತವೆಂದು ಭಾವಿಸುವಂಥ ಅಭಿರಕ್ಷೆಯಲ್ಲಿ ಸ್ಥಾನಬದ್ಧತೆಯಲ್ಲಿಟ್ಟುಕೊಂಡಿರಲು ಅಧಿಕೃತಗೊಳಿಸಬಹುದು:

ಪರಂತು, ಅಂಥ ಮ್ಯಾಜಿಸ್ಟ್ರೇಟನು,-

(i) ಅಂಥ ವ್ಯಕ್ತಿಯನ್ನು ಮೇಲೆ ಹೇಳಿದಂತೆ ತನ್ನ ಬಳಿ ಕಳುಹಿಸಿದಾಗ; ಅಥವಾ

(ii) ತಾನು ಅಧಿಕೃತಗೊಳಿಸಿದ ಸ್ಥಾನಬದ್ಧತೆಯ ಅವಧಿಯು ಮುಕ್ತಾಯವಾದ ಮೇಲೆ ಅಥವಾ ಅದಕ್ಕಿಂತ ಮುಂಚೆ ಯಾವುದೇ ಸಮಯದಲ್ಲಿ,

\- ಅಂಥ ವ್ಯಕ್ತಿಯನ್ನು ಸ್ಥಾನಬದ್ಧತೆಯು ಅನಗತ್ಯವೆಂದು ಪರಿಗಣಿಸಿದರೆ ಅಂಥ ವ್ಯಕ್ತಿಯನ್ನು ಅಧಿಕಾರ ವ್ಯಾಪ್ತಿಯುಳ್ಳ ಗೊತ್ತುಪಡಿಸಲಾದ ನ್ಯಾಯಾಲಯಕ್ಕೆ ಕಳುಹಿಸಿಕೊಡಬೇಕೆಂದು ಆದೇಶ ಮಾಡತಕ್ಕದ್ದು.

(ಸಿ) ನಿಯೋಜಿತ ನ್ಯಾಯಾಲಯವು, (ಬಿ) ಖಂಡದ ಮೇರೆಗೆ ತನ್ನ ಬಳಿ ಕಳುಹಿಸಲಾದ ವ್ಯಕ್ತಿಯ ಸಂಬಂಧದಲ್ಲಿ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 167ನೇ ಪ್ರಕರಣದ ಮೇರೆಗೆ ಒಂದು ಮೊಕದ್ದಮೆಯನ್ನು ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನು ಆ ಪ್ರಕರಣದ ಮೇರೆಗೆ ತನ್ನ ಬಳಿ ಕಳುಹಿಸಲಾದ ಆಪಾದಿತ ವ್ಯಕ್ತಿಯ ಸಂಬಂಧದಲ್ಲಿ ಯಾವ ಅಧಿಕಾರವನ್ನು ಚಲಾಯಿಸಬಹುದೋ, ಅದೇ ಅಧಿಕಾರವನ್ನು ಅಂಥ ಮೊಕದ್ದಮೆಯಲ್ಲಿ ಚಲಾಯಿಸಬಹುದು.

(ಡಿ) ನಿಯೋಜಿತ ನ್ಯಾಯಾಲಯವು ಈ ಬಗ್ಗೆ ಅಧಿಕೃತನಾದ, ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಒಬ್ಬ ಅಧಿಕಾರಿಯು ಕೊಟ್ಟ ದೂರನ್ನು ಪರಿಶೀಲಿಸಿದ ತರುವಾಯ ಆಪಾದಿತನನ್ನು ಅಧಿವಿಚಾರಣೆಗೆ ಒಳಪಡಿಸದೆ ಆ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(2) ಈ ಅಧಿನಿಯಮದ ಮೇರೆಗೆ ಒಂದು ಅಪರಾಧದ ಅಧಿವಿಚಾರಣೆ ನಡೆಸುವಾಗ, ನಿಯೋಜಿತ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಅಪರಾಧದ ಹೊರತಾಗಿ, ಯಾವ ಅಪರಾಧದ ಬಗ್ಗೆ ಅದೇ ಅಧಿವಿಚಾರಣೆಯಲ್ಲಿ ಆಪಾದಿತನನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ಆರೋಪಕ್ಕೆ ಗುರಿಪಡಿಸಬಹುದೋ ಆ ಅಪರಾಧವನ್ನು ಸಹ ಅಧಿವಿಚಾರಣೆ ಮಾಡಬಹುದು.

**6ಸಿ. ನಿಯೋಜಿತ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಸಂಹಿತೆಯ ಅನ್ವಯ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು ನಿಯೋಜಿತ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯಿಸತಕ್ಕದ್ದು ಮತ್ತು ನಿಯೋಜಿತ ನ್ಯಾಯಾಲಯದ ಮುಂದಿರುವ ವ್ಯವಹರಣೆಯನ್ನು ನಡೆಸುವ ವ್ಯಕ್ತಿಯನ್ನು ಪಬ್ಲಿಕ್ ಪ್ರಾಸಿಕ್ಯೂಟರ್‌ನೆಂದು ಭಾವಿಸತಕ್ಕದ್ದು.

## ಅಧ್ಯಾಯ – III

## ಸಂಕೀರ್ಣ

**7. ಪ್ರತ್ಯರ್ಪಣಕ್ಕೆ ಸಂಬಂಧಿಸಿದ ಉಪಬಂಧಗಳು.–** (1) 4ನೇ ಪ್ರಕರಣದ ಮತ್ತು 5ನೇ ಪ್ರಕರಣದ ಮೇರೆಗಿನ ಅಪರಾಧಗಳನ್ನು, ಒಡಂಬಡಿಕೆ ದೇಶಗಳೊಂದಿಗೆ ಭಾರತವು ಮಾಡಿಕೊಂಡ ಮತ್ತು ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಭಾರತಕ್ಕೆ ವ್ಯಾಪ್ತವಾಗುವ ಮತ್ತು ಬಂಧನಕಾರಿಯಾಗುವ ಎಲ್ಲಾ ಪ್ರತ್ಯರ್ಪಣಾ ಕಾಲಗಳಲ್ಲಿ ಪ್ರತ್ಯರ್ಪಣೀಯ ಅಪರಾಧಗಳೆಂದು ಸೇರ್ಪಡೆ ಮಾಡಲಾಗಿದೆಯೆಂದು ಮತ್ತು ಆ ಬಗ್ಗೆ ಉಪಬಂಧ ಕಲ್ಪಿಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಅಪರಾಧಗಳಿಗೆ ಪ್ರತ್ಯರ್ಪಣ ಅಧಿನಿಯಮ, 1962 (1962ರ 34)ನ್ನು ಅನ್ವಯಿಸುವ ಉದ್ದೇಶಗಳಿಗಾಗಿ, ಒಡಂಬಡಿಕೆ ದೇಶದಲ್ಲಿ ನೋಂದಣಿಯಾಗಿರುವ ಯಾವುದೇ ವಿಮಾನವು, ಹಾರಾಟದಲ್ಲಿದ್ದಾಗ ಯಾವುದೇ ಸಮಯದಲ್ಲಿ ತತ್ಕಾಲದಲ್ಲಿ ಯಾವುದೇ ಇತರ ದೇಶದ ಅಧಿಕಾರ ವ್ಯಾಪ್ತಿಯೊಳಗೆ ಇರಲಿ ಅಥವಾ ಇಲ್ಲದಿರಲಿ, ಅದು ಆ ದೇಶದ ಅಧಿಕಾರ ವ್ಯಾಪ್ತಿಯೊಳಗೆ ಇರುವುದಾಗಿ ಭಾವಿಸತಕ್ಕದ್ದು.

**7ಎ. ಜಾಮೀನಿಗೆ ಸಂಬಂಧಿಸಿದ ಉಪಬಂಧ.–** (1) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಮೇರೆಗಿನ ಒಂದು ಅಪರಾಧದ ಬಗ್ಗೆ ಆಪಾದಿತನಾದ ಯಾರೇ ವ್ಯಕ್ತಿಯು ಅಭಿರಕ್ಷೆಯಲ್ಲಿರುವಾಗ,–

(ಎ) ಅವನ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯನ್ನು ವಿರೋಧಿಸಲು ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಅವಕಾಶ ನೀಡಿದ್ದ ಹೊರತು; ಮತ್ತು

(ಬಿ) ಪಬ್ಲಿಕ್ ಪ್ರಾಸಿಕ್ಯೂಟರನು ಆ ಅರ್ಜಿಯನ್ನು ವಿರೋಧಿಸುವಾಗ, ಆಪಾದಿತನು ಅಂಥ ಅಪರಾಧದ ತಪ್ಪಿತಸ್ಥನಲ್ಲವೆಂದು ಮತ್ತು ಜಾಮೀನಿನ ಮೇಲಿರುವಾಗ ಅವನು ಯಾವುದೇ ಅಪರಾಧವನ್ನು ಮಾಡುವ ಸಂಭವವಿಲ್ಲವೆಂದು ನಂಬಲು ಯುಕ್ತ ಕಾರಣಗಳಿವೆ ಎಂದು ನ್ಯಾಯಾಲಯಕ್ಕೆ ಮನದಟ್ಟಾದ ಹೊರತು

- ಅವನನ್ನು ಜಾಮೀನಿನ ಮೇಲೆ ಅಥವಾ ಅವನ ಸ್ವಂತ ಬಂಧಪತ್ರದ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಜಾಮೀನು ನೀಡಿಕೆಗೆ ಸಂಬಂಧಿಸಿದ ಮಿತಿಗಳು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗಿನ ಪರಿಮಿತಿಗಳ ಅಥವಾ ಜಾಮೀನು ನೀಡಿಕೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗಿನ ಪರಿಮಿತಿಗಳ ಜೊತೆಗೆ ಹೆಚ್ಚುವರಿಯಾಗಿ ಇರತಕ್ಕದ್ದು.

(3) ಈ ಪ್ರಕರಣದಲ್ಲಿ ಇರುವುದು ಯಾವುದೂ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 439ನೇ ಪ್ರಕರಣದ ಮೇರೆಗಿನ ಜಾಮೀನಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ವಿಶೇಷ ಅಧಿಕಾರಗಳ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವುದೆಂದು ಭಾವಿಸತಕ್ಕದ್ದಲ್ಲ.

**8. ಒಡಂಬಡಿಕೆಗೆ ಕರಾರು ಮಾಡಿಕೊಳ್ಳುವ ಪಕ್ಷಕಾರರು.**- ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ ಹೇಗ್ ಒಡಂಬಡಿಕೆಗೆ ಕರಾರು ಮಾಡಿಕೊಳ್ಳುವ ಪಕ್ಷಕಾರರು ಯಾರು ಎಂಬುದನ್ನು ಮತ್ತು ಅವರು ಒಡಂಬಡಿಕೆಯ ಉಪಬಂಧಗಳನ್ನು ಎಷ್ಟರಮಟ್ಟಿಗೆ ಉಪಯೋಗಿಸಿಕೊಂಡಿರುವರು ಎಂಬ ಬಗ್ಗೆ ಪ್ರಮಾಣೀಕರಿಸಬಹುದು ಮತ್ತು ಅಂಥ ಯಾವುದೇ ಅಧಿಸೂಚನೆಯು ಅದರಲ್ಲಿ ಪ್ರಮಾಣೀಕರಿಸಿದ ವಿಷಯಗಳ ಬಗ್ಗೆ ಅಂತಿಮ ಸಾಕ್ಷ್ಯವಾಗಿರತಕ್ಕದ್ದು.

**9. ಕೆಲವೊಂದು ವಿಮಾನವು ಒಡಂಬಡಿಕೆ ದೇಶಗಳಲ್ಲಿ ನೋಂದಣಿಯಾಗಿರುವುದಾಗಿ ಪರಿಗಣಿಸುವ ಅಧಿಕಾರ.**- ಯಾವುದೇ ವಿಮಾನಕ್ಕೆ ಸಂಬಂಧಪಟ್ಟಂತೆ ಹೇಗ್ ಒಡಂಬಡಿಕೆಯ 5ನೇ ಅನುಚ್ಛೇದದ ಅಗತ್ಯತೆಗಳನ್ನು ಪೂರೈಸಲಾಗಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ ಅದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ವಿಮಾನವು ಈ ಅಧಿನಿಯಮದ ಉದ್ದೇಶಗಳಿಗಾಗಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಡಂಬಡಿಕೆಯ ದೇಶದಲ್ಲಿ ನೋಂದಣಿಯಾಗಿರುವುದಾಗಿ ಪರಿಗಣಿಸತಕ್ಕದ್ದೆಂದು ನಿರ್ದೇಶಿಸಬಹುದು.

**10. ಪ್ರಾಸಿಕ್ಯೂಷನ್ ನಡೆಸಲು ಪೂರ್ವಮಂಜೂರಾತಿ ಅವಶ್ಯ**- ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಯಾವುದೇ ಪ್ರಾಸಿಕ್ಯೂಷನನ್ನು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಹೂಡತಕ್ಕುದಲ್ಲ.

**10ಎ. 4ನೇ ಮತ್ತು 5ನೇ ಪ್ರಕರಣಗಳ ಮೇರೆಗಿನ ಅಪರಾಧಗಳ ಬಗ್ಗೆ ಪೂರ್ವಭಾವನೆ**- 4 ಅಥವಾ 5ನೇ ಪ್ರಕರಣದ ಮೇರೆಗಿನ ಅಪರಾಧದ ಪ್ರಾಸಿಕ್ಯೂಷನ್ನಿನಲ್ಲಿ,-

(ಎ) ಆಪಾದಿತನ ಸ್ವಾಧೀನದಿಂದ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು ಅಥವಾ ಸ್ಫೋಟಕ ವಸ್ತುಗಳನ್ನು ವಶಪಡಿಸಿ ಕೊಳ್ಳಲಾಗಿದೆಯೆಂದು ಮತ್ತು ಅದೇ ಬಗೆಯ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು ಅಥವಾ ಸ್ಫೋಟಕ ವಸ್ತುಗಳನ್ನು ಅಂಥ ಅಪರಾಧ ಮಾಡಲು ಬಳಸಲಾಗಿದೆಯೆಂದು ನಂಬಲು ಕಾರಣವಿದೆಯೆಂದು; ಅಥವಾ

(ಬಿ) ಅಂಥ ಅಪರಾಧವನ್ನು ಮಾಡುವ ಸಂಬಂಧದಲ್ಲಿ ಸಿಬ್ಬಂದಿವರ್ಗದ ಮೇಲೆ, ಪ್ರಯಾಣಿಕರ ಮೇಲೆ ಯಾವುದೇ ಬಲಪ್ರಯೋಗ ಮಾಡಿದ ಅಥವಾ ಬಲ ಪ್ರಯೋಗದ ಅಥವಾ ಇನ್ನಾವುದೇ ರೀತಿಯಲ್ಲಿ ಭಯೋತ್ಪಾದನೆಯ ಬೆದರಿಕೆ ಹಾಕಿದ ಬಗ್ಗೆ ಸಾಕ್ಷ್ಯವಿದೆಯೆಂದು ರುಜುವಾತಾದರೆ

– ನಿಯೋಜಿತ ನ್ಯಾಯಾಲಯವು, ತದ್ವಿರುದ್ಧವಾದುದು ರುಜುವಾತಾಗದ ಹೊರತು, ಆಪಾದಿತನು ಅಂಥ ಅಪರಾಧವನ್ನು ಮಾಡಿರುವನೆಂದು ಪೂರ್ವಭಾವನೆ ಮಾಡತಕ್ಕದ್ದು.

**11. ಸದ್ಭಾವನೆಯಿಂದ ಕೈಗೊಂಡ ಕಾರ್ಯಕ್ಕೆ ರಕ್ಷಣೆ.–** (1) ಈ ಅಧಿನಿಯಮದ ಉಪಬಂಧಗಳಿಗನುಸಾರ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ನ್ಯಾಯಿಕ ವ್ಯವಹರಣೆಯನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಕಾರ್ಯದಿಂದಾಗಿ ಯಾವುದೇ ಹಾನಿ ಉಂಟಾದಲ್ಲಿ ಅಥವಾ ಉಂಟಾಗುವ ಸಂಭವವಿರುವಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ನ್ಯಾಯಿಕ ವ್ಯವಹರಣೆಯನ್ನು ಹೂಡಲು ಅವಕಾಶ ಇರತಕ್ಕದ್ದಲ್ಲ.

* * *